3693(3899); ಶ್ರೀ ಬಸವರಾಜ ಎ.ಎಸ್.(ಅರಸೀಕೆರೆ);

ಮಾನ್ಯ ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಅರಸೀಕೆರೆ ತಾಲ್ಲೂಕಿನಾದ್ಯಂತ ಫ್ಲೋರೈಡ್‌ನಿಂದ ಕಂಗಾಲಾಗಿರುವ ಗ್ರಾಮಗಳ ಸಂಖ್ಯೆ ಎಷ್ಟು; ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವುದೇ; ಬೀರಿದ್ದಲ್ಲಿ, ಆ ರೀತಿಯ ಅನಾರೋಗ್ಯದ ಪ್ರಕರಣಗಳೆಷ್ಟು; ವಿವರ ನೀಡುವುದು;

ಆ) ಹಾಸನ ಜಿಲ್ಲೆಯ ಕೆಲವು ತಾಲ್ಲೂಕು ಭಾಗಗಳಲ್ಲಿ ಗ್ರಾಮಾಂತರದ ಕುಡಿಯುವ ನೀರಿನ ಸಮಸ್ಯೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ನಿಟ್ಟಿನಲ್ಲಿ ಕೊರೆದಂತಹ ಬೋರ್‌ವೆಲ್‌ಗಳಲ್ಲಿನ ನೀರು ಫ್ಲೋರೈಡ್ ಅಂಶದಿಂದಾಗಿ ಕುಡಿಯಲು ಯೋಗ್ಯವಲ್ಲವೆಂದು ಸರ್ಕಾರ ಗುರುತಿಸಿದೆಯೇ; ಈ ರೀತಿಯ ಗ್ರಾಮಗಳನ್ನು ಎಲ್ಲೆಲ್ಲಿ ಗುರುತಿಸಲಾಗಿದೆ; (ಹಾಸನ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಈ) ಫ್ಲೋರೈಡ್ ಅಂಶವನ್ನು ನಿವಾರಿಸಿ ಕುಡಿಯುವ ನೀರು ಪೂರೈಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ; ಇದರ ಸಾಧಕ – ಬಾಧಕಗಳೇನು?

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಅರಸೀಕೆರೆ ತಾಲ್ಲೂಕಿನಾದ್ಯಂತ ಒಟ್ಟು 127 ಗ್ರಾಮಗಳಲ್ಲಿ ಕುಡಿಯುವ ನೀರಿನಲ್ಲಿ ಹೆಚ್ಚುವರಿ ಫ್ಲೋರೈಡ್ ಅಂಶವಿರುತ್ತದೆ. ಹಾಗೂ ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆರೋಗ್ಯ ಇಲಾಖೆಯ ಅಂಕಿ ಅಂಶದಂತೆ 6488 ಅನಾರೋಗ್ಯ ಪ್ರಕರಣಗಳು ಕಂಡು ಬಂದಿವೆ.

ಆ) ಹಾಸನ ಜಿಲ್ಲೆಯ ಅರಸೀಕೆರೆ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಇದನ್ನು ನಿವಾರಿಸಲು ಟಾಸ್ಕ್ ಫೋರ್ಸ್ ಸಮಿತಿ ರಚಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮಗಳಲ್ಲಿ ಶುದ್ಧ ನೀರು ಸರಬರಾಜು ಮಾಡುವ ಸಲುವಾಗಿ, ಪುನಃಶ್ಚೇತನ, ಕೊಳವೆ ಬಾವಿಗಳನ್ನು ಸ್ವಚ್ಚಗೊಳಿಸುವ ಹಾಗೂ Hydrofracturing ಮಳೆ ನೀರು ಸುಗ್ಗಿ ಮುಂತಾದ ವಿವಿಧ ಯೋಜನೆಗಳನ್ನು

ಕೈಗೆತ್ತಿಕೊಳ್ಳಲಾಗಿದೆ. ಅಗತ್ಯ ಬಿದ್ದಲ್ಲಿ ನೀರಿನ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಅನಿವಾರ್ಯವಿರುವೆಡೆ ಹೊಸ ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ.

ಇ) ಅರಸೀಕೆರೆ ತಾಲ್ಲೂಕಿನ 127 ಗ್ರಾಮಗಳಲ್ಲಿ, ಚನ್ನರಾಯಪಟ್ಟಣ ತಾಲ್ಲೂಕಿಗೆ 15 ಗ್ರಾಮಗಳಲ್ಲಿ ಹಾಗೂ ಹೊಳೆನರಸೀಪುರ ತಾಲ್ಲೂಕಿನಲ್ಲಿ 8 ಗ್ರಾಮಗಳಲ್ಲಿನ ಬೋರ್‌ವೆಲ್‌ಗಳಲ್ಲಿ ಕುಡಿಯುವ ನೀರಿನಲ್ಲಿ ಹೆಚ್ಚುವರಿ ಫ್ಲೋರೈಡ್ ಅಂಶವಿರುವುದನ್ನು ಗುರುತಿಸಲಾಗಿದೆ. ಅಂತಹ ಗ್ರಾಮಗಳಲ್ಲಿನ ಕೊಳವೆ ಬಾವಿಗಳಿಗೆ ಕೆಂಪು ಬಣ್ಣವನ್ನು ಬಳಿಯಲಾಗಿದ್ದು, ಇದರಲ್ಲಿಯ ನೀರನ್ನು ಕುಡಿಯುವ ಗ್ರಾಮಸ್ಥರಿಗೆ ಸೂಚಿಸಲಾಗಿದೆ.

ಈ) ಫ್ಲೋರೈಡ್ ಮುಕ್ತ ನೀರನ್ನು ಪೂರೈಸಲು:

(ಅ) ಅಂರ್ತಜಲ ಪುನಃಶ್ಚೇತನ, ಮಳೆ ನೀರು ಕೊಯ್ಲು ಯೋಜನೆ ಹಾಗೂ ಭೂ ಮೇಲ್ಮೈ ಜಲವನ್ನು ಉಪಯೋಗಿಸಿಕೊಂಡು ಕುಡಿಯುವ ನೀರನ್ನು ಪೂರೈಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

(ಆ) ಅರಸೀಕೆರೆ ತಾಲ್ಲೂಕಿನ 52 ಗ್ರಾಮಗಳಿಗೆ ಯಗಚಿ ಜಲಾಶಯದಿಂದ ಶುದ್ಧ ಕುಡಿಯುವ ನೀರನ್ನು ಪೂರೈಸಲು ರೂ. 50.00 ಕೋಟಿ ವೆಚ್ಚದ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

(ಇ) ಅರಸೀಕೆರೆ, ತಾಲ್ಲೂಕಿನ ಎರಡು ಗ್ರಾಮಗಳಲ್ಲಿ ಡೀ–ಫ್ಲೋರಿಡೇಷನ್ ಘಟಕವನ್ನು ಅಳವಡಿಸಲಾಗಿರುತ್ತದೆ. ಹಾಗೂ ಗೃಹ ಉಪಯೋಗಿ ಡೀ–ಫ್ಲೋರಿಡೇಷನ್ ಫಿಲ್ಟರ್‌ಗಳನ್ನು ಗ್ರಾಮಸ್ಥರಿಗೆ ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

(ಈ) ಮಳೆ ನೀರು ಸುಗ್ಗಿ ಮಾಡಿ ಆಯ್ದ ಕೆಲವು ಶಾಲೆಗಳು ಮತ್ತು ಬಡ ಕುಟುಂಬಗಳ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು.

3694(4347); ಶ್ರೀ ಬಸವರಾಜ ಎ.ಎಸ್.(ಅರಸೀಕೆರೆ);
ಮಾನ್ಯ ಡಾ॥ ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ರಾಜ್ಯದಲ್ಲಿನ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ 2003–04, 2004–05 ಹಾಗೂ 2005–06ರಲ್ಲಿ ನಿಗದಿಪಡಿಸಿದ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು (ವಿವರ ನೀಡುವುದು);